ಸಿಮೆಂಟ್ ಉದ್ಯಮದ ಸುತ್ತಲೂ ಬರುವ ಕೆಳಕಂಡ ರಸ್ತೆಗಳನ್ನು ೧೯೯೦–೯೧ನೇ ಸಾಲಿನಲ್ಲಿ ಹೈದರಾಬಾದ್–ಕರ್ನಾಟಕ ಅಭಿವೃದ್ಧಿ ಯೋಜನೆಯಡಿ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ.

ರಸ್ತೆಗಳು	೧೯೯೦–೯೧ನೇ ಸಾಲಿನಲ್ಲಿ ತೆಗೆದುಕೊಳ್ಳಲು ಪ್ರಸ್ತಾಪಿಸಿರುವ ಅನುದಾನ
	ಲಕ್ಷ ರೂ. ಗಳಲ್ಲಿ
೧) ಗುಲ್ಬರ್ಗಾ/ಸೇಡಂ/ರಾವಳಪಲ್ಲಿ ರಸ್ತೆ (ರಾಜ್ಯ ಹೆದ್ದಾರಿ)	೯೨.೫೦
೨) ರಾವೂರ ಕ್ರಾಸ್‌ದಿಂದ ಚಿತ್ತಾಪುರ (ಜಿಲ್ಲಾ ಮುಖ್ಯ ರಸ್ತೆ)	೨೦.೦೦
೩) ಗುಲಬರ್ಗಾ ಯಾದಗೀರ್ ರಸ್ತೆ	
೧) ಗುಲ್ಬರ್ಗಾ ರಾಯಚೂರು ರಸ್ತೆ (ಭಾಗ)	೬೦.೦೦
೨) ಶಹಾಬಾದದಿಂದ ರಾವೂರ ಕ್ರಾಸ್‌ವರೆಗೆ	
೩) ಯಾದಗೀರದಿಂದ ಚಿತ್ತಾಪುರ	
೪) ಸಣ್ಣೂರ ಶಹಾಬಾದ್ ರಸ್ತೆ	೨೨.೫೦
	೧೯೫.೦೦

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ವೆದಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ೫–೭–೧೯೯೦ ರಂದು ವಿಸಿನೇ ಪಟ್ಟಿಯಲ್ಲಿ ರುವ ೩೮ ಪ್ರಶ್ನೆಗಳ ಪೈಕಿ, ೧೦೫೯, ೧೩೪೭, ೧೪೯೬, ೧೫೦೮ ಈ ಪ್ರಶ್ನೆಗಳನ್ನು ಹೊರತು ಪಡಿಸಿ, ಉಳಿದ ೩೪ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.

ಶಹಬಾದ್ ಪಟ್ಟಣದಲ್ಲಿ ಸಿಟಿ ಬಸ್ ಸಮಸ್ಯೆ

(೧೨೫೧) ಶ್ರೀ ಎಸ್. ಬಿ. ಚವ್ಹಾಣ, (ಶಾಹಾಬಾದ್).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಹಾಬಾದ ಪಟ್ಟಣದಲ್ಲಿ ಓಡಾಡುತ್ತಿರುವ ಎರಡು ಸಿಟಿ ಬಸ್ಸನ್ನು ಎರಡು ವರ್ಷದ ಹಿಂದೆ ರದ್ದುಗೊಳಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಜನರ ಅನುಕೂಲಕ್ಕಾಗಿ ಪುನಃ ಸಿಟಿ ಬಸ್ಸಿನ ಸೌಕರ್ಯ ಒದಗಿಸಲಾಗುವುದೇ ?

ಈ) ಹಾಗಿದ್ದಲ್ಲಿ ಎಂದಿನಿಂದ ಒದಗಿಸಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಶಹಬಾದ್‌ನಲ್ಲಿ ಈವರೆವಿಗೂ ನಗರ ಸಾರಿಗೆ ಗಳನ್ನು ಪ್ರಾರಂಭಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಶಹಾಬಾದ್ ಒಂದು ಪಟ್ಟಣ ಪ್ರದೇಶವಾದ್ದರಿಂದ ಅಲ್ಲಿ ನಗರ ಸಾರಿಗೆ ಬಸ್ಸು ಸೌಕರ್ಯ ಒದಗಿಸಲಾಗುವುದಿಲ್ಲ. ಆದಾಗ್ಯೂ ಪ್ರಯಾಣಿಕರ ಅನುಕೂಲಕ್ಕಾಗಿ ಸುತ್ತಲಿನ ಗ್ರಾಮಗಳಿಗೆ ಕಡಿಮೆ ಅಂತರದ ಗ್ರಾಮಾಂತರ ಸಾರಿಗೆ ಸೌಲಭ್ಯ ಒದಗಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.